**2ನೇ ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು ಮತ್ತು ಎಸಿಜೆಎಂ ನ್ಯಾಯಾಲಯ, ಲಘು ವ್ಯವಹಾರಗಳ ನ್ಯಾಯಾಲಯ, ಬೆಂಗಳೂರು.**

| | | |
|---|---|---|
| ಹೆಸರು | : | ಬಿ. ಮುನಿರಾಜು |
| ತಂದೆ ಹೆಸರು | : | ಲೇಟ್ ಬೈಯಣ್ಣ |
| ವರ್ಷ | : | 51ವರ್ಷ |
| ಉದ್ಯೋಗ | : | ಪಿಎಸ್ ಐ ಕೆಆರ್ ಪುರಂ ಟ್ರಾಫಿಕ್ ಪೊಲೀಸ್ ಸ್ಟೇಷನ್, ಬೆಂಗಳೂರು |
| ಸ್ಥಳ | : | ಬೆಂಗಳೂರು |

**ಸಾಕ್ಷಿಯನ್ನು ದಿನಾಂಕ 24.07.2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**
**ಮುಖ್ಯ ವಿಚಾರಣೆ ಃ- ಎದುರುದಾರರು ಪರ ಶ್ರೀಮತಿ ಪಿ.ಎಸ್.ಐ. ವಕೀಲರಿಂದಃ-**

ನಾನು ಬಾಣಸವಾಡಿ ಸಂಚಾರ ಪೊಲೀಸ್ ಠಾಣೆಯಲ್ಲಿ ದಿನಾಂಕಃ **01.07.2021**ರಿಂದ **05.01.2024**ರವರೆಗೆ ಎ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಗಾಯಾಳು ಅಜಿತ್ ಕುಮಾರ್ ಅವರು ದಿನಾಂಕಃ09.11.2022ರಂದು ಖುದ್ದಾಗಿ ಠಾಣೆಗೆ ಹಾಜರಾಗಿ ಲಿಖಿತ ದೂರನ್ನು ಕೊಟ್ಟಿದ್ದು ಅದನ್ನು ಸ್ವೀಕರಿಸಿ ಪ್ರಕರಣವನ್ನು ದಾಖಲು ಮಾಡಿ ಮೊ. ಸಂಖ್ಯೆಃ140/2022ರಂತೆ ಪ್ರಕರಣವನ್ನು ದಾಖಲು ಮಾಡಿರುತ್ತೇನೆ.

ದಿನಾಂಕಃ24.10.2022ರಂದು ಬೆಳಿಗ್ಗೆ 10.30ಗಂಟೆ ಸಮಯದಲ್ಲಿ ಬಾಣಸವಾಡಿ ರಿಂಗ್ ರೋಡಿನ ಹೊರಮಾವು ಅಂಡರ್ ಪಾಸ್ ಬಳಿ ತನ್ನ ವಾಹನ ಸಂಖ್ಯೆ ಕೆಎ-03-ಕೆಪಿ-9374 ಪ್ರಯಾಣಿಸುತ್ತಿದ್ದಾಗ ಒಂದು ಕಾರು ಬಂದು ತನಗೆ ಡಿಕ್ಕಿಪಡಿಸಿದ ಪರಿಣಾಮ ಅಪಘಾತ ಉಂಟಾಗಿ ತನಗೆ ಗಾಯಗಳು ಉಂಟಾಗಿರುತ್ತದೆ ಎಂದು ತಿಳಿಸಿರುತ್ತಾರೆ.

ತದನಂತರ ಅಪಘಾತ ನಡೆದ ಸ್ಥಳಕ್ಕೆ ನಾನು ಮತ್ತು ನಮ್ಮ ಸಿಬ್ಬಂದಿ ಭೇಟಿ ನೀಡಿ ಸ್ಥಳವನ್ನು ಪರಿಶೀಲಿಸಿ ಕೃತ್ಯ ನಡೆದ ಸ್ಥಳದ ಪಂಚನಾಮೆಯನ್ನು ಜರುಗಿಸಿ ಕಚ್ಚಾನಕಾಶೆಯನ್ನು ತಯಾರು ಮಾಡಿರುತ್ತೇನೆ. ತದನಂತರ ಪ್ರತ್ಯಕ್ಷ ಸಾಕ್ಷಿದಾರರಾದ ಹೇಮಂತ್ ಎಸ್ ಮತ್ತು ನಾಗರಾಜಾಚಾರಿ ಹೇಳಿಕೆಗಳನ್ನು ದಾಖಲು ಮಾಡಿರುತ್ತೇನೆ. ನಂತರ ಅಪಘಾತಕ್ಕೆ ಒಳಪಪಟ್ಟ ಮೋಟಾರ್ ಸೈಕಲ್ ಅನ್ನು ಅಮಾನತ್ತುಪಡಿಸಿಕೊಂಡು

ಠಾಣೆಗೆ ತಂದು ಐಎಂವಿ ತಪಾಸಣೆಯನ್ನು ಮಾಡಿಸಿರುತ್ತೇನೆ. ನಂತರ ದಿನಾಂಕಃ 18.11.2022ರಂದು ಗಾಯಾಳುವಿನ ಗಾಯದ ಪ್ರಮಾಣ ಪತ್ರವನ್ನು ಬೆಂಗಳೂರು ನಾರ್ತ್ ಆಸ್ಪತ್ರೆಯಿಂದ ಪಡೆದಿರುತ್ತೇನೆ. ನಂತರ ದಿನಾಂಕಃ 18.11.2022ರಂದು ಆರೋಪಿ ವಾಹನ ಕೆಎ-53-ಎಂಎಫ್ -1869 ಮತ್ತು ಮೋಟಾರ್ ಸೈಕಲ್ ಕೆಎ-03-ಕೆಸಿ-9374 ವಾಹನಗಳನ್ನು ಐಎಂವಿ ತಪಾಸಣೆಗಾಗಿ ಆರ್ ಟಿ ಒ ಕಸ್ತೂರಿ ನಗರಕ್ಕೆ ಕಳುಹಿಸಿರುತ್ತೇವೆ.

ದಿನಾಂಕಃ 19.11.2022ರಂದು ಆರೋಪಿ ವಾಹನದ ಮಾಲೀಕನಾದ ಶ್ರೀಧರ್ ಯಾದಲಾ ವಾಹನಕ್ಕೆ ಸಂಬಂಧಪಟ್ಟ ದಾಖಲಾತಿಗಳನ್ನು ಹಾಜರುಪಡಿಸಿದ ಮೇರೆಗೆ ಮತ್ತು ತಾನೇ ಅಪಘಾತ ಮಾಡಿ ಗಾಯಾಳುವನ್ನು ಬೆಂಗಳೂರು ನಾರ್ತ್ ಆಸ್ಪತ್ರೆಗೆ ದಾಖಲು ಮಾಡಿ ಅಲ್ಲಿಂದ ಹೆಚ್ಚಿನ ಚಿಕಿತ್ಸೆಗಾಗಿ ಮಣಿಪಾಲ್ ಆಸ್ಪತ್ರೆಗೆ ದಾಖಲು ಮಾಡಿರುವ ಬಗ್ಗೆ ತಿಳಿಸಿದ ಮೇಲೆ ಕಲಂ 133 ಎಂ ಕಾಯ್ದೆ ಅಡಿಯಲ್ಲಿ ನೋಟೀಸನ್ನು ಜಾರಿ ಮಾಡಿ ಅವರಿಂದ ಪ್ರತಿ ಉತ್ತರವನ್ನು ಪಡೆದಿರುತ್ತೇನೆ. ಅದೇ ದಿನ ಸದರಿ ಆರೋಪಿಯನ್ನು ದಸ್ತಗಿರಿ ಮಾಡಿ ಠಾಣೆಯ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ಅವರಿಂದ ಇಂಡೆಮ್ನಿಟಿ ಬಾಂಡ್ ಅನ್ನು ಪಡೆದು ಅವರ ವಶಕ್ಕೆ ಬಿಡುಗಡೆ ಮಾಡಿರುತ್ತೇನೆ. ಅದೇ ದಿನ ಕಸ್ತೂರಿ ನಗರ ಆರ್ ಟಿ ಒ ಅವರಿಂದ ವಾಹನಗಳ ತಪಾಸಣೆಯ ವರದಿ ಪಡೆದು ತನಿಖೆ ಪೂರ್ಣಗೊಂಡ ನಂತರ ಅಂತಿಮ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ನ್ಯಾಯಾಲಯದ ಆದೇಶದಂತೆ ಎಂಎಲ್ ಸಿ ಪ್ರತಿಯನ್ನು ಈ ದಿನ ನ್ಯಾಯಾಲಯಕ್ಕೆ ಹಾಜರುಪಡಿಸುತ್ತಿದ್ದೇನೆ. ಇದನ್ನು ನಿಆರ್-5 ಎಂದು ಪರಿಗಣಿಸಲಾಯಿತು.

**ಈ ಹಂತದಲ್ಲಿ 2ನೇ ಎದುರುದಾರರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಒಸಪಡಿಸಲು ಅನುಮತಿ ಕೇಳಲಾಗಿದ್ದು, ನೀಡಲಾಯಿತು.**

**ಪಾಟೀ ಸವಾಲುಃ ಎದುರುದಾರರ ಪರ ವಕೀಲರಿಂದಃ-**

ಅಪಘಾತವಾದ ದಿನಾಂಕದಂದೇ ನಮಗೆ ಯಾವುದೇ ಪೊಲೀಸ್ ಇಂಟಿಮೇಷನ್ ಬಂದಿರುವುದಿಲ್ಲ. ದಿನಾಂಕಃ04.11.2022ರಂದು ಪೊಲೀಸ್ ಇಂಟಿಮೇಷನ್ ಕೊಟ್ಟಿಲ್ಲ,

ಎಂಎಲ್ ಸಿ ನೋಟ್ ಕೊಟ್ಟರು. ಯಾವ ದಿನಾಂಕದಂದು ಸ್ವೀಕರಿಸಿರುತ್ತೇವೆ ಎಂದು ನಿ.ಆರ್-5ರಲ್ಲಿ ನಮೂದಿಸಿಲ್ಲ. ಅಪಿಷಿಯಲ್ ಆಗಿ ನಾವು ಸ್ವೀಕರಿಸಿರುತ್ತೇವೆ ಎಂದು ತೋರಿಸಲು ನಮ್ಮ ಬಳಿ ಯಾವುದೇ ದಾಖಲೆ ಇಲ್ಲ.

2. ಎಫ್ ಐ ಆರ್ ದಾಖಲಾದ ನಂತರ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡುತ್ತೇವೆ. ತದನಂತರ ಅಪಘಾತಪಡಿಸಿದ ವಾಹನದ ಮಾಲೀಕರಿಗೆ ಕಲಂ 133ಎಂ ಕಾಯ್ದೆ ನೋಟೀಸನ್ನು ಕೊಡುತ್ತೇವೆ. ನೋಟೀಸಿಗೆ ಪ್ರತಿ ಉತ್ತರ ಕೊಟ್ಟನಂತರ ವಾಹನಗಳನ್ನು ಅಮಾನತ್ತುಪಡಿಸಿಕೊಂಡು ಆರ್ ಟಿ ಒ ಕಡೆಯವರಿಂದ ತಪಾಸಣೆ ಮಾಡಿಸುತ್ತೇವೆ. ದಿನಾಂಕಃ18.11.2022ರಂದು ವಾಹನಗಳನ್ನು ತಪಾಸಣೆಗೆ ಆರ್ ಟಸಿ ಒ ಕಚೇಲರಿಗೆ ನಿವೇದಿಸಿರುತ್ತೇವೆ. ಅದು ನಿವೇದನೆ ಕಡತದಲ್ಲಿರುತ್ತದೆ ಈಗ ನನ್ನ ಬಳಿ ಇರುವುದಿಲ್ಲ,

**ಮುಂದುವರೆದ ವಾಟೀಸವಾಲಿಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ. ಇ)**

**2ನೇ ಹೆಚ್ಚುವರಿ ಲಘು ವ್ಯವಹಾರಗಳ**

**ನ್ಯಾಯಾಧೀಶರು, ಬೆಂಗಳೂರು.**